ಸಂಖ್ಯೆ: 4/ನೇಮಕಾತಿ/ಆರ್‌ಪಿಸಿ/2020-21

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)


ಕಮಾಂಡೆಂಟ್ ರವರ ಕಛೇರಿ,
5ನೇ ಪಡೆ, ಕೆ.ಎಸ್.ಆರ್.ಪಿ.,
ಲಲಿತ ಮಹಲ್ ರಸ್ತೆ, ಮೈಸೂರು-570011.
ಕಛೇರಿ ದೂರವಾಣಿ ಸಂಖ್ಯೆ.0821 2418619
ಫ್ಯಾಕ್ಸ್ ಸಂಖ್ಯೆ. 0821 2473549

ದಿನಾಂಕ: 29-11-2021.

## ಭಾಗಶಃ ಅಂತಿಮ ಆಯ್ಕೆ ಪಟ್ಟಿ

ವಿಷಯ:- 5ನೇ ಪಡೆ, ಕೆ.ಎಸ್.ಆರ್.ಪಿ. ಘಟಕದಲ್ಲಿ ಖಾಲಿ ಇರುವ 230 ಸ್ಪೆ.ಆರ್.ಪಿ.ಸಿ. ಹುದ್ದೆಗಳ ನೇಮಕಾತಿಯ ಭಾಗಶಃ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:-1) ಕೆ.ಎಸ್.ಆರ್.ಪಿ (ನೇಮಕಾತಿ ಮತ್ತು ಸೇವಾ ಷರತ್ತುಗಳು)(ತಿದ್ದುಪಡಿ)ನಿಯಮಗಳು 2020.

2) ನೇಮಕಾತಿ ಅಧಿಸೂಚನೆ ಸಂಖ್ಯೆ:15/ನೇಮಕಾತಿ-4/2019-20 ದಿನಾಂಕ:28/03/2020.

3) ಡಿ.ಐ.ಜಿ.ಪಿ. ನೇಮಕಾತಿ, ಬೆಂಗಳೂರು ರವರ ಜ್ಞಾಪನ ಸಂಖ್ಯೆ: 15/ನೇಮಕಾತಿ-4/2019-20, ದಿ: 16-02-2021.

4) ಈ ಕಛೇರಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಸಮ ಸಂಖ್ಯೆ ದಿನಾಂಕ:20-02-2021

5) ಮಾನ್ಯ ಎಡಿಜಿಪಿ ಕೆ.ಎಸ್.ಆರ್.ಪಿ. ಬೆಂಗಳೂರು. ರವರ ಜ್ಞಾಪನಾ ಸಂಖ್ಯೆ-11/ಸಿ-6/ಆರ್.ಪಿ.ಸಿ/ನೇ/2019-20 ದಿನಾಂಕ: 09-04-2021 ಹಾಗೂ 29-04-2021

* * *

ಕೆ.ಎಸ್.ಆರ್.ಪಿ/ಐ.ಆರ್.ಬಿ ಘಟಕಗಳಲ್ಲಿ ಖಾಲಿ ಇರುವ ವಿಶೇಷ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ(2)ರ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಉಲ್ಲೇಖ(2)ರ ಅಧಿಸೂಚನೆಯಲ್ಲಿ ನೀಡಲಾಗಿರುವ ನಿಯಮ ಮತ್ತು ಷರತ್ತುಗಳು ಸರ್ಕಾರದ ಅಧಿಸೂಚನೆ ಸಂಖ್ಯೆ ಹೆಚ್.ಡಿ 188 ಪೊಸಿಅ 2018 ದಿನಾಂಕ: 6/05/2020 ರ ಕೆ.ಎಸ್.ಆರ್.ಪಿ (ನೇಮಕಾತಿ ಮತ್ತು ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳು-2020 ರ ಅಧಿಸೂಚನೆಯಾನುಸಾರವಾಗಿರುತ್ತದೆ.

ಮೇಲೆ ತಿಳಿಸಲಾದ ಅಧಿಸೂಚನೆಯನ್ವಯ ನೇಮಕಾತಿ ಪ್ರಾಧಿಕಾರವು 2420 ಹುದ್ದೆಗಳಿಗೆ ದಿನಾಂಕ: 22/11/2020 ರಂದು ಲಿಖಿತ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ಸದರಿ ಲಿಖಿತ ಪರೀಕ್ಷೆಯಲ್ಲಿ 1:5 ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ(ಪಿ.ಎಸ್.ಟಿ/ಪಿ.ಇ.ಟಿ) ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.

ಉಲ್ಲೇಖಿತ(3)ರ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ ಬೆಂಗಳೂರು ರವರ ಜ್ಞಾಪನದಂತೆ ಕೆ.ಎಸ್.ಆರ್.ಪಿ(ನೇಮಕಾತಿ ಮತ್ತು ಸೇವಾ ಷರತ್ತುಗಳು)(ತಿದ್ದುಪಡಿ) ನಿಯಮಗಳು- 2020 ರನ್ವಯ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, 1:5 ಅನುಪಾತದಲ್ಲಿ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ(ಪಿ.ಎಸ್.ಟಿ/ಪಿ.ಇ.ಟಿ) ಪರೀಕ್ಷೆಗಳಲ್ಲಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ನೀಡಿದ್ದು, ಈ ಅರ್ಹತಾ ಪಟ್ಟಿಯಿಂದ ಪ್ರತಿ ವರ್ಗದಲ್ಲಿ ಅಧಿಸೂಚಿತ ಖಾಲಿ ಇರುವ ಹುದ್ದೆಗಳಿಗೆ ಮೆರಿಟ್ ಹಾಗೂ ಮೀಸಲಾತಿ ಅನುಗುಣವಾಗಿ ನೇರ ಮತ್ತು ಸಮತಲ ವರ್ಗೀಕರಣ ಮತ್ತು ಕೆ.ಎಸ್.ಆರ್.ಪಿ(ನೇಮಕಾತಿ ಮತ್ತು ಸೇವಾ ಷರತ್ತುಗಳು)(ತಿದ್ದುಪಡಿ) ನಿಯಮಗಳು-2020 ರ ಅನ್ವಯ ಸಹಿಷ್ಣುತೆ ಮತ್ತು

ದೇಹದಾರ್ಢ್ಯತೆ(ಪಿ.ಎಸ್.ಟಿ/ಪಿ.ಇ.ಟಿ) ಪರೀಕ್ಷೆಗಳಲ್ಲಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳಲ್ಲಿ 1:1 ಅನುಪಾತದಲ್ಲಿ ಈ ಘಟಕದಲ್ಲಿ ಖಾಲಿ ಇರುವ 230 ಸ್ಪೆ.ಆರ್.ಪಿ.ಸಿ ಹುದ್ದೆಗಳಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಗೆ ಉಲ್ಲೇಖಿತ(4) ರಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸದರಿ ಅಭ್ಯರ್ಥಿಗಳಿಗೆ ದಿನಾಂಕ: 01/03/2021 ರಿಂದ 10/03/2021 ರವರೆಗೆ ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲಾಗಿದೆ. ದಾಖಲಾತಿ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಗಳಿಗೆ ಹಾಜರಾಗಿ ದಾಖಲಾತಿಗಳನ್ನು ಈ ಕಛೇರಿಗೆ ನೀಡಿ ದಾಖಲಾತಿ ಪರಿಶೀಲನೆಯಲ್ಲಿ ಹಾಗೂ ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹರಾಗಿರುವ ಅಭ್ಯರ್ಥಿಗಳು ಭಾಗಶಃ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿರುತ್ತಾರೆ.

ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕ ಹಾಗೂ ಜನ್ಮ ದಿನಾಂಕವು ಒಂದೇ ಆಗಿದ್ದಲ್ಲಿ ಅಂತಹ ಸಂದರ್ಭದಲ್ಲಿ ಮಾನ್ಯ ಘನ ನ್ಯಾಯಾಲಯದ ತೀರ್ಪು "S.B.Civil Writ Petition No: 6397/2006" ರನ್ವಯ ಅನ್ವಯಿಸುತ್ತದೆ.

**"THE CRITERIA ADOPTED BY THE COMMISSION ARE AS FOLLOWS"**

(iv) When two or more candidates having secured equal marks then preference is given to the candidate who is more elder in age;

(v) When marks and age is equal then preference is given to the candidate whose academic qualification is higher;

(vi) When marks, age and higher academic qualification are same then preference is given to the candidate whose marks are more in Senior Secondary and Graduation course" ರಂತೆ ಪಡೆದ ಅಂಕಗಳ ಆಧಾರದ ಮೇಲೆ ಆಯ್ಕೆಗೆ ಪರಿಗಣಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸಿ ಈ ಕೆಳಕಂಡಂತೆ ಹೊರಡಿಸಲಾಗಿದೆ.

ಯಾವುದೇ ವೇಳೆಯಲ್ಲಿ ಈ ಭಾಗಶಃ ಆಯ್ಕೆ ಪಟ್ಟಿಯು ಘನ ಕರ್ನಾಟಕ ರಾಜ್ಯ ಆಡಳಿತ ಮಂಡಳಿ/ ಮಾನ್ಯ ನ್ಯಾಯಾಲಯದ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರುತ್ತದೆ. ಪ್ರಸ್ತುತ ಪ್ರಕಟಿಸಿರುವ ಭಾಗಶಃ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಅಭ್ಯರ್ಥಿಗಳ ಆಯ್ಕೆ ಮೀಸಲಾತಿಯು ತಾತ್ಕಾಲಿಕವಾಗಿದ್ದು ಗೈರುಹಾಜರಿ ಹಾಗೂ ಆಯ್ಕೆಯನ್ನು ರದ್ದುಪಡಿಸಲು ಕೋರಿರುವ ಅಭ್ಯರ್ಥಿಗಳ ಸ್ಥಾನಕ್ಕೆ ಹೆಚ್ಚುವರಿ ಶೇ 25 ರಷ್ಟು ಅಭ್ಯರ್ಥಿಗಳಿಗೆ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಸ್ಥಾನ ನೀಡಬೇಕಾಗಿದ್ದು ಎಲ್ಲಾ ಅಭ್ಯರ್ಥಿಗಳನ್ನು ಒಳಗೊಂಡು ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವವರೆಗೂ ಆಯ್ಕೆ ಮೀಸಲಾತಿ ಬದಲಾವಣೆಗೆ ಒಳಪಟ್ಟಿರುತ್ತದೆ. ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳ ಆಯ್ಕೆ ಮೀಸಲಾತಿ ಅಂತಿಮವಾಗಿರುತ್ತದೆ.

ಅದರಂತೆ ಈ ಘಟಕಕ್ಕೆ ಹಂಚಿಕೆ ಮಾಡಲಾದ 230 ಅಭ್ಯರ್ಥಿಗಳ ಪೈಕಿ ಈ ಕೆಳಕಂಡ 06 ಅಭ್ಯರ್ಥಿಗಳ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಆಯ್ಕೆ ಮೀಸಲಾತಿಯಂತೆ ದಾಖಲಾತಿ ಪರಿಶೀಲನೆ ಹಾಗೂ ಪೊಲೀಸ್ ಪೂರ್ವ ಚರಿತ್ರಾ ವರದಿಗಳು ಬಂದಿದ್ದು, ಸದರಿಯವರುಗಳ ವಿರುದ್ಧ ಯಾವುದೇ ಪ್ರತಿಕೂಲ ವರದಿಗಳು ಇಲ್ಲದೇ ಇರುವುದರಿಂದ ಭಾಗಶಃ ಅಂತಿಮ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದಿರುತ್ತಾರೆ.ಆದುದರಿಂದ 06 ಅಭ್ಯರ್ಥಿಗಳ ಕೆ.ಎಸ್.ಆರ್.ಪಿ. ಸ್ಪೆ.ಆರ್.ಪಿ.ಸಿ. ಹುದ್ದೆಗಳ ನೇಮಕಾತಿಯ ಭಾಗಶಃ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

## 5ನೇ ಪಡೆ ಕೆ.ಎಸ್.ಆರ್.ಪಿ ಮೈಸೂರು – ಭಾಗಶಃ ಅಂತಿಮ ಆಯ್ಕೆ ಪಟ್ಟಿ

| SL NO | Appl No | RollNo | Name | DOB | Category | Written Marks | Selection Remarks |
|---|---|---|---|---|---|---|---|
| 1 | 8161517 | 3235275 | SHIVAKUMARA S | 04-01-1996 | CAT-1 | 72.5 | CAT-1-OTH-2 |
| 2 | 8163426 | 3249685 | MANOJ R | 11-10-1998 | SC | 68.75 | SC-OTH-9 |
| 3 | 8155347 | 3235350 | MAHESHA KUMARA K S | 14-04-1998 | CAT-1 | 70.75 | CAT-1-OTH-4 |
| 4 | 8150867 | 3248868 | MALLESHA A M | 24-02-2002 | 2A | 70.5 | 2A-OTH-17 |
| 5 | 8160618 | 3140899 | PRADEEP KULAKARNI | 25-07-2000 | 3B | 73.5 | 3B-RUR-2 |
| 6 | 8156576 | 3229617 | KIRANKUMARA T S | 06-02-1996 | 3A | 72.75 | 3A-OTH-4 |

(ಆರ್.ಜನಾರ್ಧನ್)
ಅಧ್ಯಕ್ಷರು.
5ನೇ ಪಡೆ. ಕೆ.ಎಸ್.ಆರ್.ಪಿ. ಆರ್.ಪಿ.ಸಿ ನೇಮಕಾತಿ
ಆಯ್ಕೆ ಸಮಿತಿ ಹಾಗೂ ಕಮಾಂಡೆಂಟ್.
5ನೇ ಪಡೆ. ಕೆ.ಎಸ್.ಆರ್.ಪಿ. ಮೈಸೂರು.

(ಮಹದೇವಸ್ವಾಮಿ.ಎಸ್)
ಸದಸ್ಯರು.
5ನೇ ಪಡೆ. ಕೆ.ಎಸ್.ಆರ್.ಪಿ. ಆರ್.ಪಿ.ಸಿ ನೇಮಕಾತಿ
ಆಯ್ಕೆ ಸಮಿತಿ ಹಾಗೂ ಸಹಾಯಕ ಕಮಾಂಡೆಂಟ್.
5ನೇ ಪಡೆ. ಕೆ.ಎಸ್.ಆರ್.ಪಿ. ಮೈಸೂರು.

(ಕೆ.ನಾಗೇಶ್)
ಸದಸ್ಯ ಕಾರ್ಯದರ್ಶಿ.
5ನೇ ಪಡೆ. ಕೆ.ಎಸ್.ಆರ್.ಪಿ. ಆರ್.ಪಿ.ಸಿ ನೇಮಕಾತಿ
ಆಯ್ಕೆ ಸಮಿತಿ ಹಾಗೂ ಸಹಾಯಕ ಆಡಳಿತಾಧಿಕಾರಿ.
5ನೇ ಪಡೆ. ಕೆ.ಎಸ್.ಆರ್.ಪಿ. ಮೈಸೂರು.